1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 20925-2024

ಸಿಡಬ್ಲೂ -8 ಪಿಡಬ್ಲೂ-8

| | | |
|---|---|---|
| ಸಾಕ್ಷಿದಾರರ ಹೆಸರು | : | ಶೇಖರಫೀ |
| ತಂದೆಯ ಹೆಸರು | : | ಶೇಖಅಜರತ್ |
| ವಯಸ್ಸು | : | 30 ವರ್ಷ |
| ಕೆಲಸ | : | ಸಾಫ್ಟವೇರ್ ಇಂಜಿನಿಯರ್ |
| ವಾಸ | : | ಹೈದರಾಬಾದ್ |

ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

2024 ರಲ್ಲಿ ಸಿಐಡಿ ಪೊಲೀಸರಿಂದ ನನಗೆ ಕರೆ ಬಂದಿದ್ದು, ಕಚೇರಿಗೆ ಹಾಜರಾಗಿ ಹೇಳಿಕೆ ನೀಡುವಂತೆ ತಿಳಿಸಿರುತ್ತಾರೆ. ನಂತರ ಕಚೇರಿಗೆ ಬೇಟಿ ನೀಡಿ ನಾನು ಬೆಂಗಳೂರಿನಲ್ಲಿ 2018 ರಲ್ಲಿ ವಾಸವಾಗಿದ್ದಾಗ ನಾನು ಇಂಸ್ಟಾಗ್ರಾಂ ಮೂಲಕ ಪ್ಯಾನ್ಸಿ ಸಂಖ್ಯೆಗಳು ದೊರೆಯುವ ಬಗ್ಗೆ ಮಾಹಿತಿ ಪಡೆದುಕೊಂಡು ಅದರಂತೆ ನಾನು ಪ್ಯಾನ್ಸಿ ಸಂಖ್ಯೆಗಾಗಿ ಮನವಿಯನ್ನು ಸಲ್ಲಿಸಿರುತ್ತೇನೆ. 786 ನಂಬರ್ ಮೂಲಕ ಮುಕ್ತಾಯಗೊಳ್ಳುವ ಸಂಖ್ಯೆಯಿಂದ ನನ್ನ ಮನವಿಯನ್ನು ಅಂಗೀಕರಿಸಿದ್ದು ಅದರಂತೆ ನನಗೆ 9143133786 ಪ್ರಾನ್ಸಿ ಸಂಖ್ಯೆಯನ್ನು ಮೊದಲು ಖರೀದಿಸಿರುತ್ತೇನೆ. ಅದಕ್ಕಾಗಿ ನಾನು ರೂ.1,300/- ರಿಂದ 1,500/- ರೂ. ಹಣವನ್ನು ಪಾವತಿ ಮಾಡಿರುತ್ತೇನೆ.

ನಾನು ಹಣ ಪಾವತಿಸಿರುವ ಬಗ್ಗೆ ಸ್ಕ್ರೀನ್ ಶಾಟ್ ಮನವಿ ಅಂಗೀಕರಿಸಿದ ಸಂಖ್ಯೆಗೆ ವರ್ಗಾವಣೆ ಮಾಡಿರುತ್ತೇನೆ. ನಂತರ ಅವರು ನನಗೆ ಮತ್ತೊಂದು ಸಂಖ್ಯೆಯನ್ನು ನೀಡಿ ಅವರನ್ನು ಬೇಟಿ ಮಾಡುವಂತೆ ತಿಳಿಸಿದ್ದು ಅದರಂತೆ ನಾನು ಆ ಸಂಖ್ಯೆದಾರರನ್ನು ಬೇಟಿ ಮಾಡಿರುತ್ತೇನೆ. ನಂತರ ನಾನು ಸ್ಥಳೀಯ ಸೀಮ್ ಮಾರಾಟಗಾರರ ಬಳಿ ಹೋಗಿ ಸೀಮ್ ಸಂಖ್ಯೆಯನ್ನು ಪಡೆದಿರುತ್ತೇನೆ. ನಂತರ ನಮ್ಮ ಮಾಲೀಕರಾದ ದೊರೈಬಾಬು ರವರ ಜೊತೆಯಲ್ಲಿ ನಾನು ಪ್ಯಾನ್ಸಿ ಸಂಖ್ಯೆಯನ್ನು ಪಡೆದುಕೊಂಡ ಬಗ್ಗೆ ತಿಳಿಸಿರುತ್ತೇನೆ. ಅವರು ಹೆಚ್ಚು 9 ಇರುವ ಸಂಖ್ಯೆಗಳನ್ನು ತಮಗೆ ಕೊಡಿಸುವಂತೆ ತಿಳಿಸಿರುತ್ತಾರೆ.

ನಂತರ ಪುನಃ ನಾನು ಪ್ಯಾನ್ಸಿ ಸಂಖ್ಯೆ ನಂಬರ್ ನ್ನು ಸಂಪರ್ಕಿಸಿರುತ್ತೇನೆ. ಅದರಂತೆ ಅವರು ಮತ್ತೊಂದು ಪ್ಯಾನ್ಸಿ ಸಂಖ್ಯೆಗೆ ರೂ. 4 ಸಾವಿರ ಹಣ ನೀಡಬೇಕಾಗುತ್ತದೆ ಎಂದು ಹೇಳಿ ನನಗೆ 9699999955 ಸಂಖ್ಯೆಯನ್ನು ನೀಡಿರುತ್ತೇನೆ. ನಂತರ ನಾನು ರೂ. 4 ಸಾವಿರ ಹಣವನ್ನು ಪಾವತಿ ಮಾಡಿ ಆ ಬಗ್ಗೆಯೂ ಸಹ ಸ್ಕ್ರೀನ್ ಶಾಟ್ ನ್ನು ಅವರಿಗೆ ಕಳುಹಿಸಿರುತ್ತೇನೆ. ನಂತರ ಪೊಲೀಸರ ಮೂಲಕ ಆ ರೀತಿ ಪ್ಯಾನ್ಸಿ ಸಂಖ್ಯೆಗಳನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಹೆಸರು ಹರೀಶ ಎಂದು ಗೊತ್ತಾಗಿರುತ್ತದೆ. ಈ ಮೇಲಿನ ವಿಚಾರದಲ್ಲಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**Inspite of direction Accused has not called his advocate for cross examination, hence PW 8 cross taken as closed.**

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ